ಒ ಎಸ್ 48/2014 ಡಿ.ಡಬ್ಲ್ಯೂ 1

ಇಂದು ದಿಃ 25.10.2025 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ

ದಾವಾ ಆಸ್ತಿಗಳು ಗುಂಡಾ ಬಿನ್ ಮಾದರವರಿಗೆ ಸೇರಿದ ಆಸ್ತಿಗಳು ಎಂದರೆ ಸರಿ. ರಾಮಶೆಟ್ಟಿ ನನ್ನ ದೊಡ್ಡಪ್ಪ. ಚಿಕ್ಕರಾಮಶೆಟ್ಟಿ ನನ್ನ ತಂದೆ. ಗುಂಡ ಬಿನ್ ಮಾದರವರಿಗೆ ಮಾದಮ್ಮ ಎಂಬ ಮಗಳು ಇದ್ದಳು ಎಂದರೆ ನನಗೆ ಗೊತ್ತಿಲ್ಲ. ನಾನು ಹಾಜರುಪಡಿಸಿರುವ ಕ್ರಯ ಪತ್ರದ ಮೂಲ ಪ್ರತಿ ನಮ್ಮ ಬಳಿ ಇಲ್ಲ. ಬುಂಡನ ಪುಟ್ಟಮಾದಯ್ಯ ಗುಂಡ ಬಿನ್ ಮಾದರವರಿಗೆ ಸಂಬಂಧದಲ್ಲಿ ಏನಾಗಬೇಕು ಎಂದು ಕ್ರಯ ಪತ್ರದಲ್ಲಿ ಬರೆದಿದ್ದಾರಾ ಎಂದು ನನಗೆ ಗೊತ್ತಿಲ್ಲ. ಗುಂಡ ಬಿನ್ ಮಾದನಿಗೆ ಮಾದಮ್ಮ ಸಂಬಂಧದಲ್ಲಿ ಏನಾಗಬೇಕು ಎಂದು ಕ್ರಯಪತ್ರದಲ್ಲಿ ಬರೆದಿರುವ ಬಗ್ಗೆ ನಾನು ನೋಡಿಲ್ಲ. ಕ್ರಯಪತ್ರ ಬರೆದುಕೊಡಲು ನನ್ನ ತಾತನಿಗೆ ಯಾವುದೇ ರೀತಿಯ ಕಾನೂನಾತ್ಮಕ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆ ಎಂ ಎಫ್ ಸಿ, ನಂಜನಗೂಡು.